ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
## (ಕರ್ನಾಟಕ ಸರ್ಕಾರದ ಒಂದು ಉದ್ಯಮ)

**ನೊಂದಾಯಿತ ಕಛೇರಿ:** ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010

ದೂರವಾಣಿ:080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

---

ಸಂಖ್ಯೆ::ಕೈವ:ನಿರ್ವಹಣಾನೀತಿ:ಮಾರ್ಗಸೂಚಿ:2023-24 ದಿನಾಂಕ: 01-04-2024

## ಕಛೇರಿ ಆದೇಶ

ವಿಷಯ: ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳ ಪರಿಷ್ಕರಣೆ ಕುರಿತು – ಹಂಚಿಕೆ ಪುನರ್ ಸ್ಥಾಪನೆ ಕಾಲಾವಧಿಯನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ:
1. ಕಛೇರಿ ಆದೇಶ ಸಂಖ್ಯೆ ಕೈವ:ನಿರ್ವಹಣಾನೀತಿ:ಮಾರ್ಗಸೂಚಿ : 2023-24 ದಿನಾಂಕ 27.10.2023.
2. ದಿನಾಂಕ 29.02.2024ರಂದು ಜರುಗಿದ ನಿಗಮದ 372ನೇ ಮಂಡಳಿ ಸಭೆಯ ನಡವಳಿ (ವಿಷಯ ಸೂಚಿ ಸಂಖ್ಯೆ 372/02)

------

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ದಿನಾಂಕ 07.09.2023 ರಂದು ಜರುಗಿದ ನಿಗಮದ 370ನೇ ಮಂಡಳಿ ಸಭೆಯಲ್ಲಿ ತೀರ್ಮಾನದಂತೆ ಉಲ್ಲೇಖ (1)ರ ಕಛೇರಿ ಆದೇಶದಲ್ಲಿ ನಿಗಮವು ಹಂಚಿಕೆ ಪುನರ್ ಸ್ಥಾಪನೆ ನೀತಿ ಅನ್ವಯ ಕ್ರಯಪತ್ರ ವಿತರಿಸುವ ಸಂದರ್ಭದಲ್ಲಿ ವಿಧಿಸುತ್ತಿದ್ದ ಶೇ.10ರಷ್ಟು ಚಾಲ್ತಿ ದರದ ದಂಡವನ್ನು ಈ ಕಛೇರಿ ಆದೇಶ ದಿನಾಂಕದಿಂದ ರಿಯಾಯಿತಿ ನೀಡಿ ಹಂಚಿಕೆ ಪುನರ್ ಸ್ಥಾಪನೆ ನೀತಿಯನ್ನು ದಿನಾಂಕ 31.03.2024ರವರೆಗೆ ವಿಸ್ತರಿಸಲಾಗಿತ್ತು.

ನಿಗಮದ 370ನೇ ಮಂಡಳಿ ಸಭೆಯ ನಡವಳಿಯಲ್ಲಿನ ವಿಷಯಗಳಿಗೆ ಸಲ್ಲಿಸಲಾಗಿದ್ದ ಅನುಸರಣಾ ವರದಿಯನ್ನು ಗಮನಿಸಿದ ನಿಗಮದ 372ನೇ ಮಂಡಳಿ ಸಭೆಯು ಈ ಮುಂದಿನಂತೆ ನಿರ್ಣಯ ಕೈಗೊಂಡಿರುತ್ತದೆ. ಈ ಹಿಂದಿನ ಮಂಡಳಿ ಸಭೆಯ "ವಿಷಯ ಸಂಖ್ಯೆ-370/10ಕ್ಕೆ ಸಂಬಂಧಿಸಿದಂತೆ ನಿಗಮವು ದಿನಾಂಕ 27.10.2023 ರಂದು ಹೊರಡಿಸಿದ್ದ ಆದೇಶವನ್ನು ದಿನಾಂಕ 30.09.2024 ರವರೆಗೆ ವಿಸ್ತರಿಸಲು ತೀರ್ಮಾನಿಸಲಾಯಿತು".

ನಿಗಮದ 372ನೇ ಮಂಡಳಿ ಸಭೆಯ ವಿಷಯ ಸಂಖ್ಯೆ 372/02ರಲ್ಲಿನ ನಿರ್ಣಯದಂತೆ, ನಿಗಮವು ಹಂಚಿಕೆ ಪುನರ್ ಸ್ಥಾಪನೆ ನೀತಿ ಅನ್ವಯ ಕ್ರಯಪತ್ರ ವಿತರಿಸುವ ಸಂದರ್ಭದಲ್ಲಿ ವಿಧಿಸುತ್ತಿದ್ದ ಶೇ.10ರಷ್ಟು ಚಾಲ್ತಿ ದರದ ದಂಡವನ್ನು ಈ ಕಛೇರಿ ಆದೇಶ ದಿನಾಂಕದಿಂದ ರಿಯಾಯಿತಿ ನೀಡಿ, ಹಂಚಿಕೆ ಪುನರ್ ಸ್ಥಾಪನೆ ನೀತಿಯನ್ನು ದಿನಾಂಕ 30.09.2024 ರವರೆಗೆ ವಿಸ್ತರಿಸಲಾಗಿದೆ ಹಾಗೂ ಉಳಿದಂತೆ ಉಲ್ಲೇಖ (1)ರ ಕಛೇರಿ ಆದೇಶದಲ್ಲಿ ನೀಡಲಾಗಿದ್ದ ಸೂಚನೆಗಳು ಮುಂದುವರೆಯುತ್ತವೆ. ಅದರಂತೆ ಸೂಕ್ತ ಕ್ರಮವಹಿಸಲು ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು

**ಇವರಿಗೆ,**
1. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ), ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಮೈಸೂರು/ಶಿವಮೊಗ್ಗ/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ ಅವರ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ದಾವಣಗೆರೆ/ಬಳ್ಳಾರಿ ಅವರ ಮಾಹಿತಿಗಾಗಿ ಹಾಗೂ ಅವಶ್ಯ ಕ್ರಮಗಳಿಗಾಗಿ.

**ಪ್ರತಿ:**
1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ, ಭೂಸ್ವಾಧೀನ)/(ಹಣಕಾಸು) ಕರಾಸಕೈಅನಿನಿ. ಬೆಂಗಳೂರು.
2. ಉಪ ಪ್ರಧಾನ ವ್ಯವಸ್ಥಾಪಕರು (ಆ.ಲೆ.ಪ)/(ಕೈವ)ವ-1&2/(ಸಮನ್ವಯ) ಕರಾಸಕೈಅನಿನಿ, ಬೆಂಗಳೂರು.
3. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಹಣಕಾಸು) ಕರಾಸಕೈಅನಿನಿ, ಬೆಂಗಳೂರು.
4. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.